**ಸಾಕ್ಷಿಗೆ ದಿನಾಂಕಃ25-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.GNC ವಕೀಲರಿಂದ ::**

ನನ್ನ ತಂದೆ ಚಂದ್ರೆಗೌಡ ರವರು ದಾವಾ ಬಿ ಸ್ವತ್ತಿಗೆ ಸಂಬಂಧಪಟ್ಟಂತೆ ಅದನ್ನು ಸಾರ್ವಜನಿಕರಿಗೆ ಬಿಟ್ಟು ಕೊಟ್ಟು ಒಂದು ಒಪ್ಪಿಗೆ/ಪ್ರಮಣಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು 1990 ರಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ದಾವಾ ಬಿ ಸ್ವತ್ತಿನಲ್ಲಿ ಪಂಚಾಯಿತಿಯವರು ಕ್ರಿಯಾ ಯೋಜನೆಯಡಿಯಲ್ಲಿ ಹಣ ಬಳಕೆ ಮಾಡಿ ಸಾರ್ವಜನಿಕ ರಸ್ತೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ ಸಾರ್ವಜನಿಕರು ಹಾಗೂ ನಾನು ದಾವಾ ಬಿ ಸ್ವತ್ತನ್ನು ರಸ್ತೆಯಾಗಿ ಉಪಯೋಗಿಸುತ್ತಿತ್ತಾರೆ ಎಂದರೆ ಸರಿಯಲ್ಲ. ಸದರಿ ಸಾರ್ವಜನಿಕರಿಗೆ ಸದರಿ ರಸ್ತೆ ಹೊರತುಪಡಿಸಿ ಆ ಜಾಗದಲ್ಲಿ ಬೇರೆ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. 1990 ರಲ್ಲಿ ದಾವಾ ಬಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ತಂದೆ ಪಂಚಾಯಿತಿಗೆ ಬರೆದುಕೊಟ್ಟಿರುವ ಒಪ್ಪಿಗೆ/ಪ್ರಮಣಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರು ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಂಚಾಯಿತಿಯವರು ದಾವಾ ಬಿ ಸ್ವತ್ತನ್ನು ರಸ್ತೆಯಾಗಿ ಅಭಿವೃದ್ದಿ ಮಾಡುವ ಸಮಯದಲ್ಲಿ ನಾನು ಅವರಿಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿಯವರು ಯಾವುದೇ ರಸ್ತೆ ನಿರ್ಮಾಣ ಮಾಡಿರುವುದಿಲ ಎಂದು ನುಡಿಯುತ್ತಾರೆ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: